ಶುದ್ಧಿಯಾದ ನಂತರ ನಾವು ಕಂದು ಬಣ್ಣ ಅಥವಾ ಹಳದಿ ಬಣ್ಣವನ್ನು ಪರಿಗಣಿಸುತ್ತಿರಲಿಲ್ಲ

ಉಮ್ಮು ಅತಿಯ್ಯ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಪ್ರವಾದಿಯವರಿಗೆ
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಿಷ್ಠೆಯ ಪ್ರತಿಜ್ಞೆ ಮಾಡಿದವರಾಗಿದ್ದರು.
ಅವರು ಹೇಳಿದರು: "ಶುದ್ಧಿಯಾದ ನಂತರ ನಾವು ಕಂದು ಬಣ್ಣ ಅಥವಾ ಹಳದಿ ಬಣ್ಣವನ್ನು ಪರಿಗಣಿಸುತ್ತಿರಲಿಲ್ಲ."
[(صحيح] [رواه أبو داود بهذا اللفظ ورواه البخاري بدون زيادة (بعد الطهر]

ಸಹಾಬಿ ವನಿತೆ ಉಮ್ಮು ಅತಿಯ್ಯ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ಇಲ್ಲಿ ತಿಳಿಸುವುದೇನೆಂದರೆ, ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಕಾಲದಲ್ಲಿ ಮಹಿಳೆಯರು ಮುಟ್ಟಿನಿಂದ ಶುದ್ಧಿಯಾದ ನಂತರ ಜನನಾಂಗದಿಂದ ಸ್ರವಿಸುವ ಕಡುಗಂದು ಅಥವಾ ಕಡುಹಳದಿ ಬಣ್ಣದ ದ್ರವವನ್ನು ಮುಟ್ಟಿನ ರಕ್ತವೆಂದು ಪರಿಗಣಿಸುತ್ತಿರಲಿಲ್ಲ ಮತ್ತು ಅದರ ಕಾರಣದಿಂದ ನಮಾಝ್ ಅಥವಾ ಉಪವಾಸವನ್ನು ತೊರೆಯುತ್ತಿರಲಿಲ್ಲ.

https://sunnah.global/hadeeth/kn/show/10014